## ಕಳೆದ ಸಂಚಿಕೆಯಲ್ಲಿ



ಸರೋಜಾಳೊಂದಿಗಿನ ಅಪ್ಪನಿಗೆ ಇರಬಹುದಾದ ಸಂಬಂಧದ ಕುರಿತ ಅನುಮಾನ ಭಾಮಳಲ್ಲಿ ಬಲಿಯುತ್ತಲೇ ಹೋಯಿತು. ಹೀಗೆ ಶುರುವಾದ ಅನುಮಾನದಿಂದಾಗಿ ಅಪ್ಪನೊಂದಿಗೆ ಎಂದಿನ ಸಲಿಗೆಯಲ್ಲಿ ಇರಲು ಸಾಧ್ಯವಾಗದೆ ಭಾಮ ಚಡಪಡಿಸಿದಳು. ಅಪ್ಪನೊಂದಿಗೆ ಒರಟಾಗಿ ನಡೆದುಕೊಳ್ಳತೊಡಗಿದಳು. ಕಾಲೇಜಿನ ಕಾರ್ಯಕ್ರಮವೊಂದರಲ್ಲಿ ಉಡಲಿಕ್ಕಾಗಿ ಅಮ್ಮನ ಸೀರೆ ತೆಗೆದುಕೊಳ್ಳಲು ಹೋದವಳಿಗೆ ಆಘಾತ ಕಾದಿತ್ತು. ಅಲ್ಲಿದ್ದ ಸೀರೆಗಳ ಸಂಗ್ರಹ ಕರಗಿತ್ತು. ತಾನು ಉಡಲು ಬಯಸಿದ್ದ ದುಬಾರಿ ಸೀರೆಯೂ ಇರಲಿಲ್ಲ. ಅಮ್ಮನ ಸೀರೆಗಳ ಅಪ್ಪನ ಮೂಲಕ ಸರೋಜಾಳ ಮನೆಗೆ ಹೋಗಿರುವ ಸಾಧ್ಯತೆ ನೆನೆದು ಅವಳ ಸಂಕಟ ಹೆಚ್ಚಾಯಿತು. ಸೀರೆಗಳು ಕಾಣೆಯಾಗಿರುವುದರ ಕುರಿತು ಅಪ್ಪನೊಂದಿಗೆ ವಾದಿಸಿದ ಭಾಮ, ಯಾವ ಸಮಜಾಯಿಷಿಯನ್ನೂ ಒಪ್ಪದೆ ಇನ್ನಷ್ಟು ಕುಗ್ಗಿದಳು. ಹೀಗೆ ಮಾನಸಿಕವಾಗಿ ಕುಗ್ಗಿದ ಸಮಯದಲ್ಲಿ ಮನಸ್ಸಿಗೆ ಹತ್ತಿರವಾದವನು ಸಹಪಾಠಿ ವೆಂಕಟೇಶ. ಗಂಡನಿಂದಲೇ ಕೊಲೆಯಾದ ಅಕ್ಕನ ಬಗ್ಗೆ ಹೇಳಿಕೊಂಡು ಅವನು ಸಂಕಟಪಟ್ಟಾಗ ಭಾಮಳ ಮನಸ್ಸು ಗೆಳೆಯನಿಗೆ ಮಮ್ಮಲ ಮರುಗಿತು.

ಅರ್ಧಕ್ಕೆ ನಿಂತಿದ್ದ ಮಾತುಕತೆ ಇಳಿಮಧ್ಯಾಹ್ನದ ಕಾಫಿಯ ಜೊತೆ ಮತ್ತೆ ಚಾಲನೆಗೆ ಬಂತು. ಈಗ ವ್ಯತ್ಯಾಸ ಒಂದೇ. ಭಾರ್ಗವ ಮನೆಯಲ್ಲಿಲ್ಲ. ಗೆಳೆಯರ ಜೊತೆ ಕ್ರಿಕೆಟ್ ಆಡಲು ಆಚೆ ಹೋಗಿದ್ದಾನೆ. ಮನೆಯಲ್ಲಿ ಅಪ್ಪ, ಮಗಳು ಇಬ್ಬರೇ. ನಿದ್ದೆಯ ನೆಪದಲ್ಲಿ ಕೋಣೆ ಸೇರಿಕೊಂಡಿದ್ದರೂ ಅಪ್ಪ ನಿದ್ದೆ ಮಾಡದೆ ಇದನ್ನೇ ತಲೆಯಲ್ಲಿ ತಿರುವಿ ಹಾಕುತ್ತಿರುತ್ತಾನೆ ಎಂದು ಭಾಮನಿಗೆ ಗೊತ್ತು. ಯಾರೇ ಆದರೂ ಮಕ್ಕಳ ಇಂಥಾ ತೀರ್ಮಾನಕ್ಕೆ ತಕ್ಷಣ ಸಮ್ಮತಿಯ ಮುದ್ರೆ ಒತ್ತಿಬಿಡುವುದಿಲ್ಲ. ಒಳಿತು, ಕೆಡುಕುಗಳ ಪರಾಮರ್ಶೆ ನಡೆದೇ ನಡೆಯುತ್ತದೆ. ಹೇಳಿಕೊಳ್ಳುವಂಥ ಅಡ್ಡಿ ಆತಂಕಗಳಿಲ್ಲದಿದ್ದರೆ ಹಸಿರು ನಿಶಾನೆ ದೊರೆಯುವ ಸಂಭವವಿದ್ದರೂ ತನ್ನ ವಿಷಯದಲ್ಲಿ ಹೀಗಾಗುವುದಿಲ್ಲವೆಂಬ ಕಳವಳ ಭಾಮನಿಗೆ ಇದ್ದೇ ಇದೆ. ಅದು ಆಗಿದ್ದೂ ಹಾಗೇ.

ಮಗಳು ತಂದುಕೊಟ್ಟ ಕಾಫಿ ಲೋಟ ಕೈಗೆ ತೆಗೆದುಕೊಳ್ಳುತ್ತಾ ಚಿದಾನಂದ ಹೇಳಿದ,

'ಬಾ, ಕೂತ್ಕೋ'

ಶುರುವಾಗುತ್ತದೆ ವಿಚಾರಣೆ. ಭಾಮನ ಎದೆಬಡಿತ ಅವಳಿಗೇ ಕೇಳಿಸುವಷ್ಟು ತೀವ್ರವಾಗುತ್ತಿದೆ. ಚಿದಾನಂದನ ಎದುರು ಕುರ್ಚಿಯಲ್ಲಿ ವಿನೀತಳಾಗಿ ಕೂತಳು ಭಾಮ.

'ಹೇಳು ಈಗ, ಯಾರು ಅವನು? ಅಪ್ಪ, ಅಮ್ಮ ಯಾರು? ಅಪ್ಪ ಏನ್ಮಾಡ್ತಿದಾರೆ?'

'ಅಪ್ಪನ ವಿಷಯ ಗೊತ್ತಿಲ್ಲ'.

'ಮತ್ತೆ? ಇವನು ಇನ್ನೂ ಓದ್ತಿದಾನೆ. ಒಂದೊಳ್ಳೇ ಕೆಲಸ ಹಿಡಿಯೋವರೆಗೆ ಅವಸರ ಮಾಡಿದ್ರೆ ಅನ್ನ ಹಾಕಿ ಸಾಕೋರು ಗಟ್ಟಿಯಾಗಿರೋದು ಬೇಡ್ವಾ?'

'ಒಂದಿಷ್ಟು ಜಮೀನಿದೆ ಅಂತಿದ್ದ...'

'ಒಂದಿಷ್ಟು ಅಂದ್ರೆ?'

'ಬದುಕೋಕೆ ಕೊರತೆ ಆಗದಷ್ಟು.'

'ಅವನೇ ಹೇಳಿದ್ದಾ?'

'.......'

'ಅವನು ಹೇಳಿದ, ನೀನು ನಂಬಿಬಿಟ್ಟೆ...'

'ಏನೋ ಒಂದು ಕೆಲಸ ಹುಡುಕ್ಕೋತೀವಿ ಅಪ್ಪಾ...'

'ಏನೋ ಒಂದು ಅಂದ್ರೆ? ಅಂಥಾ ಕಾರ್ಪಣ್ಯದ ಬದುಕು ಯಾಕೆ ಆರಿಸ್ಕೋಬೇಕು? ಪ್ರಾಯದ ಸೊಕ್ಕಲ್ಲಿ ಏನು ಬೇಕಾದ್ರೂ ಮಾಡ್ತೀವಿ ಅನ್ನೋ ಹುಮ್ಮಸ್ಸಿರುತ್ತೆ. ಆಳ ಗೊತ್ತಾಗೋದು ನೀರಿಗೆ ಇಳಿದ ಮೇಲೆ...'

ಅಪ್ಪ ಇನ್ನೂ ಮುಖ್ಯ ವಿಷಯಕ್ಕೇ ಬಂದಿಲ್ಲ. ಆಗಲೇ ತೀರ್ಮಾನ ತೆಗೆದುಕೊಂಡವರಂತೆ ಮಾತಾಡುತ್ತಿದ್ದಾರೆ. ಭಾಮ ನಿರೀಕ್ಷಿಸುತ್ತಿದ್ದ ಆ ಪ್ರಶ್ನೆ ಚಿದಾನಂದನ ಬಾಯಿಂದ ಬಂದೇ ಬಂತು,

'ಜಾತಿ, ಕುಲ, ಗೋತ್ರ ಎಲ್ಲಾ ಕೇಳ್ಕೊಂಡಿದೀಯಾ? ಜಾತಕ ಹೊಂದಾಣಿಕೆಯಾಗ್ದೆ ಮದುವೆ ಮಾಡೋ ಪದ್ಧತಿ ನಮ್ಮಲ್ಲಿ ಇಲ್ಲ ಅಂತ ಗೊತ್ತಿದೆ ತಾನೇ?'

ಅಮ್ಮನ ವಿಷಯ ಎತ್ತಬಹುದಿತ್ತು. ಆದರೆ ಬಾಯಿ ಬಿಗಿ ಹಿಡಿದಳು ಭಾಮ. ಅವನ ಜಾತಿ ಯಾವುದೆಂದು ಈಗ ಹೇಳಲೇಬೇಕು. ಏನಾಗುತ್ತದೆಯೋ ಆಗಲಿ, ಹೇಳದೆ ವಿಧಿ ಇಲ್ಲ

'ಅವನು ನಮ್ಮ ಜಾತಿ ಅಲ್ಲ ಅಪ್ಪಾ' ಎಂದಳು ಭಾಮ ಉಗುಳು ನುಂಗಿಕೊಳ್ಳುತ್ತಾ. ಬಣ್ಣಗೆಟ್ಟಿತು ಚಿದಾನಂದನ ಮುಖ.

'ಏನೇ ನೀನು? ನಮ್ಮ ಜಾತಿ ಅಲ್ಲ ಅಂತಿದ್ದಿ. ಹೇಳಿಕೊಳ್ಳುವಷ್ಟು ಸ್ಥಿತಿವಂತಿಕೆ ಇಲ್ಲ ಅಂತಿದ್ದಿ. ಕೆಲಸ ಹುಡುಕ್ಕೋತೀವಿ ಅಂತಿದ್ದಿ. ಹುಚ್ಚು ಹಿಡಿದಿದ್ಯಾ ನಿಂಗೆ?'

'.........'

'ನಿನ್ನಪ್ಪ ನಾನಿನ್ನೂ ಬದುಕಿದೀನಿ. ನಮ್ಮ ಯೋಗ್ಯತೆಗೆ ತಕ್ಕ ಸಂಬಂಧ ಹುಡುಕಿ ಮದುವೆ ಮಾಡ್ತೀನಿ. ನಿಂಗೆ ಅವಸರ ಆಗಿದ್ರೆ ನಾಳೆಯಿಂದಾನೇ ಗಂಡು ಹುಡುಕೋಕೆ ಶುರು ಮಾಡೋಣ. ಹೆಣ್ಣು ಕೊಡಬೇಕಾದ್ರೆ ನಮಗಿಂಥ ಅಂತಸ್ತಿನಲ್ಲಿ ಮೇಲಿರೋರಿಗೆ ಕೊಡ್ಬೇಕು ಅಂತಾರೆ, ಗೊತ್ತುಂಟಾ ನಿಂಗೆ?'

'.........'

ಮದುವೆ ಅಂದ್ರೆ ಹುಡುಗಾಟ ಅಂದ್ಕೊಂಡಿದೀಯಾ? ನೀನು ಹೀಗೆ ಕುಲಗೆಟ್ಟು ಹೋಗ್ತಿ ಅಂತ ನಂಗೆ ಗೊತ್ತೇ ಇರ್ಲಿಲ್ಲ. ನನ್ನ ಮಗಳು ಅಂದ್ರೆ ಅಪ್ಪಟ ಅಪರಂಜಿ ಅಂದ್ಕೊಂಡಿದ್ದೆ. ತಾಯಿ ಇಲ್ಲದ ಮನೆ ಸಂಭಾಳಿಸ್ತಿದ್ದಿ ಅಂತ ಹೆಮ್ಮೆ ಇತ್ತು ನಂಗೆ. ಈಗ ನೋಡಿದ್ರೆ...' ಗದ್ಗದವಾಯ್ತು ಚಿದಾನಂದನ ದನಿ.

'ಬೇಜಾರು ಮಾಡ್ಕೋಬೇಡ ಅಪ್ಪ. ಜಾತಿ ಬಿಟ್ಟು ಮದುವೆಯಾದೋರು ಬೇಕಾದಷ್ಟು ಜನ ಇಲ್ವಾ? ಅದೂ ಅಲ್ದೆ...'

'.........'

'ಈಗ್ಲೇ ಮದುವೆ ಆಗ್ಬೇಕು ಅಂತ ನಮಗೆ ಅವಸರ ಏನಿಲ್ಲ. ಇನ್ನೂ ನಾಲ್ಕಾರು ವರ್ಷ ಬೇಕಾದ್ರೂ ಕಾಯ್ತೀವಿ. ಮುಖ್ಯ ನೀನು ಒಪ್ಕೋಬೇಕು...'

'.........'

'ನಾಳೆ ಯಾರನ್ನೋ ಹುಡುಕಿ ಮದುವೆ ಮಾಡ್ಕೋ ಅನ್ಬಾರ್ದಲ್ವಾ? ಅದಕ್ಕೇ ಮುಂಚೇನೇ ಹೇಳ್ತಿರೋದು...'

'ನಾಲ್ಕಾರು ವರ್ಷ ಅಲ್ಲ, ಹತ್ತಿಪ್ಪತ್ತು ವರ್ಷ ಕಳೆದ್ರೂ ಜಾತಿ ಬಿಟ್ಟು ನೀನು ಮದುವೆಯಾಗೋದು ನಂಗೆ ಸುತರಾಂ ಇಷ್ಟ ಇಲ್ಲ. ಆ ಯೋಚನೇನ ತಲೆಯಿಂದ ಕಿತ್ತಾಕು...'

ಮದುವೆಯಾಗಬೇಕಾದರೆ ಅಡ್ಡಗಾಲು ಹಾಕುವ ಜಾತಿ ಅನೈತಿಕ ಸಂಬಂಧ ಬೆಳೆಸಬೇಕಾದರೆ ಅಡ್ಡಿಯಾಗುವುದಿಲ್ಲವಾ? ಎಂದು ಕೇಳಬೇಕೆಂದು ನಾಲಿಗೆ ತುರಿಸಿತು ಭಾಮನಿಗೆ. ಕೇಳಲಿಲ್ಲ ಭಾಮ. ಅಷ್ಟು ಮಿತಿ ಮೀರಿಲ್ಲ ಅವಳ ಸ್ವಭಾವ. ಹೇಳುತ್ತಿದ್ದಾನೆ ಚಿದಾನಂದ,

'ನಾಕು ದಿನ ಎಲ್ಲಾ ಚೆನ್ನಾಗಿರುತ್ತೆ ಕಣೇ. ಆಮೇಲೆ ಹಳಸೋಕೆ ಶುರುವಾಗುತ್ತೆ. ಜೊತೆಗೆ ಇರೋ ಹಾಗಿಲ್ಲ, ಬಿಟ್ಟು ಬರೋ ಹಾಗಿಲ್ಲ ಅನ್ನೋ ಪರಿಸ್ಥಿತಿ ಬರುತ್ತೆ. ಏನ್ಮಾಡ್ತಿ ಆಗ? ಜಾತಿ ಅಂದ್ರೆ ಬರೀ ಜಾತಿ ಅಲ್ಲ ಕಣೇ. ಅದರ ಹಿಂದೆ ಒಂದು ಸಂಸ್ಕಾರ ಇರುತ್ತೆ. ಆಹಾರ ಪದ್ಧತಿ ಇರುತ್ತೆ. ರೀತಿ ನೀತಿ ಇರುತ್ತೆ. ಹೊಂದಿಕೊಂಡು ಹೋಗೋದು ಹೇಳಿದಷ್ಟು ಸುಲಭ ಅಲ್ಲ.'

'ಮನಸ್ಸು ಮಾಡಿದ್ರೆ ಕಷ್ಟಾನೂ ಅಲ್ಲ, ಅಲ್ವಾ ಅಪ್ಪ?'

'ಇದು ಅಹಂಕಾರದ ಮಾತು. ಹಿರಿಯರ ಅನುಭವಕ್ಕೆ ಬೆಲೆ ಕೊಡ್ಬೇಕು...'

'ನಮಗೂ ಒಂದು ಮನಸ್ಸು ಅಂತ ಇರಲ್ವಾ? ಅಂತರಾತ್ಮ ಇರಲ್ವಾ?'

'ಓಹೋಹೋಹೋ, ದೊಡ್ಡ ದೊಡ್ಡ ಪದ ಹಾಕಿ ಮಾತಾಡೋಕೆ ಕಲಿತುಬಿಟ್ಟಿದ್ದಿ. ನೀನು ಏನೇ ಹೇಳು, ನನ್ನ ನಿರೀಕ್ಷೆಗೆ ತಕ್ಕ ಯಾವುದೂ ನೀನು ಹುಡುಕಿಕೊಂಡೋನಿಗೆ ಇಲ್ಲ. ಅದರಲ್ಲೂ ಮುಖ್ಯವಾಗಿ ಜಾತಿ...'

'ಅಪ್ಪಾ...'

'ನಾಲ್ಕು ದಿನ ಉಪವಾಸ ಕೆಡವಿದ್ರೆ ಬದುಕು ಅಂದ್ರೆ ಏನೂಂತ ನಿಂಗೆ ಗೊತ್ತಾಗುತ್ತೆ. ಇದೆಲ್ಲಾ ತಿಂದ ಕೊಬ್ಬಿನ ಮಹಾತ್ಮೆ. ಒದ್ದು ಮೂಲೇಲಿ